ಎಂ.ಎಸ್ ಮಾಡಿದ ವಿಶ್ವವಿದ್ಯಾಲಯ... ಇತ್ಯಾದಿಯಾಗಿ ಎಲ್ಲಾ ವಿವರಗಳೂ ಅಲ್ಲಿದ್ದವು. ಅಷ್ಟು ಮಾತ್ರದಿಂದಲೇ ಇವನಿಗೊಂದು ಹೆಣ್ಣನ್ನು ಸೂಚಿಸಲು ಧೈರ್ಯಸಾಲದೆ,

"ನಿಮ್ಮ ಕುರಿತು, ವೈಯುಕ್ತಿಕ ಜೀವನದ ಕುರಿತು ಹೆಚ್ಚಿನ ಮಾಹಿತಿ ಒದಗಿಸುವುದು ನಮ್ಮ ದೃಷ್ಟಿಯಿಂದ ಅಗತ್ಯ. ನಿಮ್ಮ ಪೂರ್ವಾಪರ ಪರಶೀಲಿಸಿದ ನಂತರ ನಿಮಗೆ ಸೂಕ್ತ ವಧುವನ್ನು ಸೂಚಿಸುತ್ತೇವೆ. ಈ ದಿನ ಸಂಜೆ ಐದು ಗಂಟೆಗೆ ನಮ್ಮ ಕಚೇರಿಯಲ್ಲಿ ಭೇಟಿ ಮಾಡಿ" ಎಂದು ಮರು ಒಕ್ಕಣಿಕೆ ಬರೆದು ತಣ್ಣಗುಳಿದೆ.

ಸಂಜೆ ಐದು ಗಂಟೆಯ ಆಜುಬಾಜಿನಲ್ಲಿ ಜೀನ್ಸ್ ಟೀಶರ್ಟ್‌ಧಾರಿ ಗಂಡಸೊಬ್ಬ ನೇರ ಒಳನುಗ್ಗಿ "ಹೈ, ಐ ಯಾಮ್ ಗೌತಮ್" ಎಂದು ಕೈ ನೀಡಿದ. ನಾನೂ ಶಿಷ್ಟವಾಗಿ ಕೈ ಕುಲುಕಿ "ಓ... ಯೂ ಆರ್ ದ ಒಬ್ ಹೂ ಮೇಲ್ಡ್ ಮೀ. ಪ್ಲೀಸ್ ಟೇಕ್ ಯುವರ್ ಸೀಟ್" ಎಂದೆ. ಒಂದು ಬಾರಿ ನನ್ನನ್ನು ಆಪಾದಮಸ್ತಕ ಅಳೆವವನಂತೆ ನೋಡಿ ನನ್ನೆದುರಿನ ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ "ಏನ್ರಿ ಯಾರನ್ನಾದ್ರೂ ರೆಡಿ ಮಾಡಿದೀರೇನ್ರಿ? ತೋರಿಸ್ರಿ ಫೋಟೊಗಳನ್ನು; ಅಟ್ಲೀಸ್ಟ್ ಹುಡುಗೀರ ಡೀಟೇಲ್ಸ್ ಆದ್ರೂ ಕೊಡ್ರಿ" ಎಂದು ಸರಾಗವಾಗಿ ಮಾತಾಡತೊಡಗಿದ. ತಕ್ಷಣ ಮನಸ್ಸು ತುಸು ರೇಗಿದರೂ ಸಂಯಮ ಕಳಕೊಳ್ಳದೆ,

"ಕೂಲ್ ಮಿಸ್ಟರ್ ಗೌತಮ್. ನೀವು ಈಗ್ತಾನೆ ಇಲ್ಲಿಗೆ ಬರ್ತಾ ಇದೀರ, ನಿಮ್ಮ ಬಗ್ಗೆ ಏನೂ ಗೊತ್ತಿಲ್ದೆ ನಿಮಗೆ ಎಂಥ ಹುಡುಗಿ ಬೇಕೂಂತಾನೂ ಹೇಳ್ದೆ ನಮ್ಮ ಸಂಸ್ಥೆ ಹ್ಯಾಗೆ ಸಹಾಯ ಮಾಡೋಕ್ಕಾಗುತ್ತೆ" ಮಾತು ಮುಂದುವರಿಸುತ್ತಿದ್ದಾಗ ಮಧ್ಯದಲ್ಲೇ ಅಡ್ಡಬಾಯಿ ಹಾಕಿ, "ಎಂಥಾ ಹುಡುಗಿ ಅಂದ್ರೆ... ಹುಡುಗಿನಪ್ಪ... ನಿಮ್ಮಂಗಿದ್ರೆ ಸಾಕು. ನಾನೇನೂ ತುಂಬಾ ಎಕ್ಸ್‌ಪೆಕ್ಟ್ ಮಾಡ್ತಾ ಇಲ್ಲ. ಒಂದು ಗ್ರಾಜುಯೇಟ್ ಆಗಿರ್ಲಿ" ಎಂದ. ಒಂದು ಕ್ಷಣ ದಂಗಾದೆ. ಸಾವರಿಸಿಕೊಂಡು "ಹಂಗಂದ್ರೇನ್ರಿ? ಹುಡುಗಿ ನನ್ನ ತರಹ ಚೆನ್ನಾಗಿರಬೇಕು ಅಂತ್ಲ?" ಎಂದೆ ಎದಿರೇಟು ಕೊಡುತ್ತಾ.

"ಓಹೋ ನೀವು ತುಂಬಾ ಚೆನ್ನಾಗಿದೀನಿ ಅಂದ್ಕೊಂಡಿದೀರ? ಹೋಗ್ಲಿ ಬಿಡಿ. ಭ್ರಮೆಗಳು ಎಲ್ಲರಿಗೂ ಇರುತ್ತೆ" ಎಂದು ನಗೆಯಾಡಿದ.

'ಹುಡುಗನಿಗೆ ಹಾರ್ಲೆ ಡೇವಿಡ್ಸನ್ ಬೈಕ್ ಇರಬೇಕು, ಹುಡುಗಿ 32–28–34 ಇರಬೇಕು' ಎನ್ನುವ ತಿಕ್ಕಲು ಡಿಮ್ಯಾಂಡುಗಳನ್ನೆಲ್ಲ ಕೇಳಿ ರೂಢಿಯಾಗಿದ್ದ ನನಗೆ ಮದುವೆಗೆ ಇಂತಹ ಆದ್ಯತೆಯೊಂದನ್ನು ಕೇಳಿ ಏನೂ ಅಚ್ಚರಿಯಾಗಲಿಲ್ಲ.

"ಹೋಗ್ಲಿ ನನ್ನ ವಿಷ್ಯ ಯಾಕೆ ಬೇಕು ಹೇಳಿ. ನಿಮ್ಮ ವಿಷ್ಯ ಹೇಳಿ" ಎಂದೆ.

"ನನ್ನ ವಿಷ್ಯ... ಎಲ್ಲಾ ಬರೆದಿದ್ದೆನಲ್ಲ. ಇನ್ನೇನಿದೆ ಹೇಳಕ್ಕೆ?" ಎಂದ. "ಅದಲ್ಲ ಕಣ್ರೆ ನೀವು ಮೂರು ಸಾರಿ ಡಿವೋರ್ಸ್ ಆಗಿದೆ ಅಂತೀರಿ. ಒಂದು ಸಾರಿ ವಿಚ್ಛೇದನ ಮಾಡಿಕೊಂಡೋರ್ಗೇ ಹೆಣ್ಣು ಸಿಗಲ್ಲ. ನೂರು ಪ್ರಶ್ನೆ ಕೇಳ್ತಾರೆ, ಡಿವೋರ್ಸ್‌ಗೆ ಕಾರಣ ಕೇಳ್ತಾರೆ. ಹೇಳಿ ಕೇಳಿ ನೀವು ಮೂರು ಸಾರಿ... ನಾವೂ ಹುಡುಗಿಗೆ ಕನ್ವಿನ್ಸ್ ಮಾಡಿ ತಾನೆ ನಿಮ್ಮವರೆಗೆ ತರಬೇಕು. ಆದ್ದರಿಂದ..." ಎಂದೆ.

ಅವನು "ಶ್ಯೋ... ಅದು ತುಂಬಾ ಪರ್ಸನಲ್ ವಿಷ್ಯ, ಯಾಕೆ ಡಿವೋರ್ಸ್ ಆಯ್ತು ಅಂದ್ರೆ... ನಾನೇನು ಹೇಳ್ಲಿ? ಅದೂ ನಾನ್ಯಾಕೆ ನಿಮ್ಹತ್ರ ಹೇಳ್ಲಿ? ಒಂದು ವೇಳೆ ಹುಡುಗಿ ಇಷ್ಟ ಆದ್ರೆ ಅವಳ ಜೊತೆ ಮಾತಾಡ್ತೀನಿ ಸರಿ ಅಲ್ವಾ?" ಎಂದ ಅನುನಯಿಸುತ್ತಾ. ನನಗು ಸರಿ ಎನ್ನಿಸಿತು.

"ಹೋಗ್ಲಿ ನಿಮ್ಮ ಆದ್ಯತೆಗಳೇನು? ಹುಡುಗಿಯ ಬಗ್ಗೆ..." ಎಂದೆ.